**ಪಾಠ 11**

## ಸಭೆ:

# ಸಭೆಯು ಸಭಾಪಂಗಡವಾಗಿದೆಯೋ?

**ಪದದ ವಿವರಣೆ ಮತ್ತು ಅಧ್ಯಯನ**

1. **"ಸಭಾಪಂಗಡ" ಎಂಬುದರ ಅರ್ಥವೇನು?**
   a. ಪಂಗಡ ಮಾಡುವ ಇಲ್ಲವೇ ಹೆಸರಿಡುವ ಕಾರ್ಯಗಳು.
   b. ಅದೇ ಹೆಸರಿನಿಂದ ಕರೆಯಲ್ಪಟ್ಟ ವ್ಯಕ್ತಿಗಳ ಸಮಾಜ ಇಲ್ಲವೇ ಗುಂಪು; ಮತ; ಕ್ರೈಸ್ತರ ಸಭಾಪಂಗಡದಂತೆ.
   c. ಯಾವುದೇ ಸಭಾಪಂಗಡವಾಗಿ ವರ್ಗೀಕರಿಸುವಾಗ ಅಥವಾ ಒಕ್ಕಣಿಸುವಾಗ, ಒಂದು ನಾಮಧ್ಯೇಯ, ಒಂದು ಹೆಸರು, ಅಂಕಿತ, ಇಲ್ಲವೇ ಹುದ್ದೆ; ವಿಶೇಷವಾಗಿ, ಒಂದೇ ರೀತಿಯ ವ್ಯಕ್ತಿಗಳ ಒಂದು ತರಗತಿಗಾಗಿ ಸಾಮಾನ್ಯ ಹೆಸರು (Webster's Dictionary).
2. **ಯಾವಾಗ ವಿವಿಧ ಸಭಾಪಂಗಡಗಳು ಸಭಾಪಂಗಡಗಳಾದವು – ಹೆಸರು ಹೊಂದಿದವು? ಯಾವಾಗ ಅವು ಸಂಘಟಿಸಲ್ಪಟ್ಟವು?** ಅವೆಲ್ಲವುಗಳೂ ಹೊಸ ಒಡಂಬಡಿಕೆಯ ಸಮಯಗಳಿಂದ.
3. **ಹೇಗೆ ಸಭಾಪಂಗಡಗಳನ್ನು ಧಾರ್ಮಿಕ ಜಗತ್ತನ್ನು ವಿಭಾಗ ಮಾಡುತ್ತದೆಂಬುದನ್ನು ತೋರಿಸಿರಿ (1 ಕೊರಿಂಥ 1:12, 13).**

**ಸಭಾಪಂಗಡಗಳ ಆರಂಭ**

1. **ಅದರ ಪ್ರಾರಂಭದ ಮೂಲದಲ್ಲಿ ಒಂದನ್ನು ಹೇಳಿರಿ.**
   ಅತಿಶಯವಾಗಿ ಒಂದು ರೀತಿಯ ಆಡಳಿತೆಯ ರೂಪವನ್ನು ಒತ್ತಿ ಹೇಳುವದರಿಂದ. ಉದಾಹರಣೆಗಳು - ಪ್ರೆಸ್ಬಿಟೆರರಿಂದ ಇಲ್ಲವೇ ಹಿರಿಯರಿಂದ ಆಳಲ್ಪಡವುದು ಎಂಬ ಅರ್ಥವುಳ್ಳ presbuteros ಎಂಬ ಗ್ರೀಕ ಪದದಿಂದ ಪ್ರೆಸ್ಬಿಟೇರಿಯನ್ ಚರ್ಚ್ ತನ್ನ ಹೆಸರನ್ನು ಹೊಂದಿದೆ.
2. **ಸಭಾಪಂಗಡದ ಇನ್ನೊಂದು ಮೂಲದ ಹೆಸರು ಹೇಳಿರಿ.**
   ಅತಿಶಯವಾಗಿ ಕೆಲವೊಂದು ಧರ್ಮ ತತ್ವಗಳನ್ನು ಒತ್ತಿ ಹೇಳುವದರಿಂದ. ಉದಾಹರಣೆಗಳು - ಬಾಪ್ತಿಸ್ಟರು, ಬಾಪ್ತಿಸ್ಮದಿಂದ; ಪರಿಶುದ್ಧತೆ, ಪರಿಶುದ್ಧತೆಯ ಮೇಲೆ ಹೆಚ್ಚು ಒತ್ತು ಕೊಡುವುದರಿಂದ; ಸೆವೆಂತ್ ಡೇ ಅಡ್ವೆಂಟಿಸ್ಟರು, ಸಬ್ಬತ್ ದಿನ ಮತ್ತು ಕ್ರಿಸ್ತನ ಎರಡನೆಯ ಬರೋಣವನ್ನು ಪ್ರಾಮುಖ್ಯವಾಗಿ ಇಟ್ಟುಕೊಂಡದ್ದರಿಂದ; ಪೆಂತೆಕೊಸ್ತಿಯನ್ನರು, ಪಂಚಾಶತ್ತಮ ದಿನದ ಘಟನೆಗಳಿಗೆ ವಿಶೇಷ ಗಮನ ಕೊಡುವದರಿಂದ.
3. **ಸಭಾಪಂಗಡದ ಇನ್ನೊಂದು ಮೂಲದ ಹೆಸರು ಹೇಳಿರಿ.**
   ಅತಿಶಯವಾಗಿ ಪ್ರಸಿದ್ಧ ಪುರುಷರಿಗೆ ಗೌರವ ಕೊಡಲ್ಪಟ್ಟದ್ದರಿಂದ. ಉದಾಹರಣೆಗಳು - ಲೂಥರಾನರು, ಮಾರ್ಟಿನ್ ಲೂಥರನಿಂದ; ವೆಸ್ಲಿಯನ್ನರು, ವೆಸ್ಲಿಯಿಂದ; ಕಾಲ್ವಿನಿಸಮ್, ಜಾನ್ ಕಾಲ್ವಿನ್‌ನಿಂದ.

4. **ಸಭಾಪಂಗಡದ ಇನ್ನೊಂದು ಮೂಲದ ಹೆಸರು ಹೇಳಿರಿ.**
   ಸ್ಥಳ ಇಲ್ಲವೇ ಪ್ರಾದೇಶಿಕ ಮಿತಿಗಳಿಂದ. ಉದಾಹರಣೆಗಳು - ಉತ್ತರ ಮತ್ತು ದಕ್ಷಿಣ ಬಾಪ್ತಿಸ್ಟರು; ಉತ್ತರ ಮತ್ತು ದಕ್ಷಿಣ ಮೆಥೋಡಿಸ್ಟರು; ಕಂಬರ್‌ಲ್ಯಾಂಡ್ ಪ್ರೆಸ್ಬಿಟೇರಿಯನ್ನರು; ಚರ್ಚ್ ಆಫ್ ಇಂಗ್ಲಾಡ್.

**ಯೋಚಿಸಲು ವಿಷಯಗಳು**

1. **ಕರ್ತನ ಸಭೆಯು ಮೇಲೆ ಹೇಳಿದ ಯಾವುದೇ ಮೂಲಗಳಿಂದ ಪ್ರಾರಂಭವಾಯಿತೋ? ಹೊಸ ಒಡಂಬಡಿಕೆಯ ಸಭೆಯು ಹಾಗಾದರೆ ಸಭಾ ಪಂಗಡವಾಗಿರುವುದೋ?**
2. **ಸಭೆಯನ್ನು ಯಾರು ಸ್ಥಾಪಿಸಿದರು (ಮತ್ತಾಯ 16:18)?**
3. **ಸಭೆಯ ಶಿರಸ್ಸು ಯಾರು (ಎಫೆಸ 1:21, 22; ಕೊಲೊಸ್ಸೆ 1:18)?**
4. **ಜನರ ಹಿಂಬಾಲಕರನ್ನು ಪೌಲನು ಹೇಗೆ ಖಂಡಿಸುತ್ತಾನೆ (1 ಕೊರಿಂಥ 1:10-13)?**
5. **ಯಾವ ಮಾತುಗಳಿಂದ ಸಭೆಯು ವ್ಯಕ್ತಪಡಿಸಲ್ಪಟ್ಟಿದೆ (ಮತ್ತಾಯ 16:18; 1 ಕೊರಿಂಥ 1:2; 1 ತಿಮೊಥೆ 3:15; ಕೊಲೊಸ್ಸೆ 1:18; ಅಪೊಸ್ತಲರ ಕೃತ್ಯಗಳು 20:28; ಇಬ್ರಿಯ 12:23; ರೋಮಾಪುರ 16:16)?**
6. **ಪೌಲನು ಕೆಲವರನ್ನು "ಶರೀರಾಧೀನ ಸ್ವಭಾವದವರು" ಎಂದೂ ಯಾಕೆ ಕರೆದನು (1 ಕೊರಿಂಥ 3:3, 4)?**
   **ಅಂಥವರೆಲ್ಲರ ಕಡೆಗೆ ಕೃಸ್ತನ ಮನೋಭಾವನೆ ಯಾವುದಾಗಿರ ಬೇಕು (ಕೊಲೊಸ್ಸೆ 2:21, 22)?**
7. **ಜನರ ಹಿಂಬಾಲಕರನ್ನು ಯೇಸುವು ಹೇಗೆ ಖಂಡಿಸಿದನು (ಮತ್ತಾಯ 15:9, 13)?**
8. **ಒಬ್ಬನು ಸಭಾ ಪಂಗಡದವನಾಗಿ ಹೇಗೆ ಆಗಬಹುದು? ಉದಾಹರಣೆಗಳನ್ನು ಕೊಡಿರಿ.**

**ಸಭಾಪಂಗಡವಾಗಿರುವುದು ಖಂಡಿಸಲ್ಪಟ್ಟದ್ದು**

1. **ವಿಭಾಗಗಳಿಗೆ ಕಾರಣರಾಗುವಂಥವರನ್ನು ಹೇಗೆ ನಡೆಸಿಕೊಳ್ಳಬೇಕು? ಯಾಕೆ (ರೋಮಾಪುರ 16:17, 18)?**
2. **ಯಾವುದರಿಂದ ಪೌಲನು ವಿಭಾಗಗಳ ಪಟ್ಟಿ ಮಾಡಿದ್ದಾನೆ (ಗಲಾತ್ಯ 5:19-21)?**
3. **ಕೊರಿಂಥದವರು ಎಷ್ಟು ಪಕ್ಷಗಳಲ್ಲಿ ವಿಭಾಗವಾಗಿದ್ದರು (1 ಕೊರಿಂಥ 1:11, 13)? ಅವರ ಪರಿಸ್ಥಿಯ ಬಗ್ಗೆ ಪೌಲನು ಏನು ಹೇಳಿದನು (1 ಕೊರಿಂಥ 3:1-4)?**
4. **ಹೊಸ ಒಡಂಬಡಕೆಯಲ್ಲಿ ಸೆಕ್ಟೇರಿಯಾನಿಜಮ್ (ಧರ್ಮದ ಭಿನ್ನವರ್ಗಾವಲಂಬಿತತೆಯನ್ನು) ಕುರಿತು ಹೇಗೆ ಮಾತಾಡಲ್ಪಟ್ಟಿದೆ?**
   "Sect" (ಗುಂಪು, ಪಕ್ಷ) ಎಂಬ ಪದವು hairesis ಎಂಬ ಗ್ರೀಕ್ ಪದದಿಂದ ಬಂದಿದೆ, ಮತ್ತು ಅದು ಒಂಭತ್ತು ಸಲ ಉಪಯೋಗಿಸಲ್ಪಟ್ಟಿದೆ. ಅದು ಒಳ್ಳೆ ಅರ್ಥದಲ್ಲಿ ಎಂದೂ ಉಪಯೋಗಿಸಲ್ಪಟ್ಟಿರುವದಿಲ್ಲ. ಉಲ್ಲೇಖಗಳನ್ನು ಓದಿರಿ: ಅಪೊಸ್ತಲರ ಕೃತ್ಯಗಳು 5:17; 15:5; 24:5, 14; 26:5; 28:22; 1 ಕೊರಿಂಥ 11:19; ಗಲಾತ್ಯ 5:20; 2 ಪೇತ್ರ 2:1.
   a. ಅದು "ಗುಂಪು," "ಭಿನ್ನಾಭಿಪ್ರಾಯಗಳು," "ಪಾಷಂಡ ವಾದಗಳು," ಎಂದು ಭಾಷಂತರಿಸಲ್ಪಟ್ಟಿದೆ.
   b. ಪಾಷಂಡ ಮತದವನೆಂದು ದೂರಲ್ಪಟ್ಟಾಗ ಪೌಲನು ಏನು ಹೇಳಿದನು (ಅಪೊಸ್ತಲರ ಕೃತ್ಯಗಳು 24:14)?
   c. ಮತಾಭಿಮಾನದಿಂದ ತುಂಬಿದವರು ಅಪೊಸ್ತಲರೊಂದಿಗೆ ಹೇಗೆ ವ್ಯವಹರಿಸಿದರು (ಅಪೊಸ್ತಲರ ಕೃತ್ಯಗಳು 5:17, 18, 40)?



© 2009 Truth for Today